ಸ್ಥಾಪನೆ : 1979 : 23562229, 23460051, 23461344

# ಮಹಿಳಾ ಕೋ-ಆಪರೇಟಿವ್ ಬ್ಯಾಂಕ್ ಲಿ.,

ಆಡಳಿತ ಕಛೇರಿ : ನಂ. 14 ಸೌತ್ ಎಂಡ್ ರಸ್ತೆ, ಶೇಷಾದ್ರಿಪುರಂ, ಬೆಂಗಳೂರು - 560 020

ರಿಜಿಸ್ಟರ್ಡ್ ನಂ : JRB/Cell 11/68/Regn. 4875/77-78 RBI Licence No. ACDKA124P

ಮಾನ್ಯ ಸದಸ್ಯರೇ,

ದಿನಾಂಕ 20.12.2020ರ ಭಾನುವಾರದಂದು 10.00ಘಂಟೆಯಿಂದ ಮಧ್ಯಾಹ್ನ 1.00ಘಂಟೆವರೆಗೆ 2019-20ನೇ ಸಾಲಿನ 42ನೇ ವಾರ್ಷಿಕ ಸರ್ವಸದಸ್ಯರ ಸಭೆಯನ್ನು ಕರ್ನಾಟಕ ಸರ್ಕಾರದ ಆದೇಶದ ಮೇರೆಗೆ ವರ್ಚುವಲ್ /ವೀಡಿಯೊ ಸಮಾವೇಶದ ಮುಖಾಂತರ ನಡೆಸಲು ತೀರ್ಮಾನಿಸಲಾಗಿದೆ. ಈ ವರ್ಚುವಲ್ ಸಭೆಯಲ್ಲಿ ಭಾಗವಹಿಸಲು ಬ್ಯಾಂಕಿನ ನಿಯತ ಸದಸ್ಯರ ಮೊಬೈಲ್ ಸಂಖ್ಯೆಯು ಅವಶ್ಯವಾಗಿರುವುದರಿಂದ ಎಲ್ಲಾ ಸದಸ್ಯರು ತಮ್ಮ ಮೊಬೈಲ್ ಸಂಖ್ಯೆಯನ್ನು 10.12.2020ರೊಳಗೆ ಬ್ಯಾಂಕಿಗೆ ಸಲ್ಲಿಸಲು ಕೋರಲಾಗಿದೆ. ಮೊಬೈಲ್ ಸಂಖ್ಯೆಯನ್ನು ಈಗಾಗಲೇ ಸಲ್ಲಿಸಿದ್ದು, ಮೊಬೈಲ್ ಸಂಖ್ಯೆ ಬದಲಾಯಿಸಿರುವ ಸದಸ್ಯರು ಕೂಡ ಮೇಲಿನ ದಿನಾಂಕದೊಳಗೆ ತಮ್ಮ ಹೊಸ ಸಂಖ್ಯೆಯನ್ನು ಸಲ್ಲಿಸಲು ವಿನಂತಿಸಲಾಗಿದೆ.

ಸದಸ್ಯರು ಈ ಕೆಳಗೆ ನೀಡಿರುವ ಲಿಂಕ್‌ಗೆ ಲಾಗಿನ್ ಆಗಿ ಸಭೆಯಲ್ಲಿ ಭಾಗವಹಿಸಲು ತಿಳಿಸಲಾಗಿದೆ.

**https://cdn.vouchpro.tv/mahilabankagm**

## ವಿಷಯಗಳು

1. ಪ್ರಾರ್ಥನೆ.
2. ಸ್ವಾಗತ ಭಾಷಣ.
3. ಸರ್ವ ಸದಸ್ಯರ ಸಭೆಯ ಸೂಚನಾ ಪ್ರಕಟಣೆಯನ್ನು ಓದಿ ದಾಖಲು ಮಾಡುವುದು.
4. 2018-19ನೇ ಸಾಲಿನ ಸರ್ವ ಸದಸ್ಯರ ಸಭೆಯ ನಡವಳಿಕೆಗಳನ್ನು ಓದಿ ದೃಢೀಕರಿಸುವುದು.
5. ಆಡಳಿತ ಮಂಡಲಿಯು ಮಂಡಿಸಿದ 2019-20ನೇ ಸಾಲಿನ ವಾರ್ಷಿಕ ವರದಿಯ ಪರಿಗಣನೆ.
6. 2019-20ನೇ ಸಾಲಿನ ಲೆಕ್ಕಪರಿಶೋಧನಾ ವರದಿ ಮತ್ತು ಅನುಪಾಲನಾ ವರದಿಗಳ ಪರಿಶೀಲನೆ.
7. 2018-19ರ ಲೆಕ್ಕಪರಿಶೋಧನಾ ವರದಿಯಲ್ಲಿ ಕಂಡು ಬಂದ ನ್ಯೂನತೆಗಳನ್ನು ಸರಿಪಡಿಸಲು ತೆಗೆದುಕೊಂಡ ಕ್ರಮಗಳ ಪರಿಶೀಲನೆ.
8. ಆಡಳಿತ ಮಂಡಲಿಯು ರೂಪಿಸಿದ ಬ್ಯಾಂಕಿನ 2020-21ನೆಯ ವಾರ್ಷಿಕ ಸಾಲಿನ ಕ್ರಿಯಾಯೋಜನೆ ಮತ್ತು ಕಾರ್ಯ ಚಟುವಟಿಕೆಗಳ ಪರಿಗಣನೆ.
9. ಬ್ಯಾಂಕಿನ ಕಾರ್ಯಾಚರಣೆಗಳ ಅವಲೋಕನ ಹಾಗೂ ಬ್ಯಾಂಕಿನ ಕಾರ್ಯಾಚರಣೆಗಳಲ್ಲಿ ಕೊರತೆ ಏನಾದರೂ ಇದ್ದಲ್ಲಿ, ಆ ಬಗ್ಗೆ ಪರಿಶೀಲನೆ ಮತ್ತು ಅಂತಹ ಕೊರತೆಯನ್ನು ನೀಗಿಸಲು ಹಮ್ಮಿಕೊಂಡ ಕ್ರಮದ ಅವಲೋಕನ.
10. 2019-20 ನೇ ಸಾಲಿನ ಖರ್ಚು ಹಾಗೂ ಅಂದಾಜು ಆಯವ್ಯಯ ಪಟ್ಟಿಗಿಂತ ಹೆಚ್ಚಿಗೆ ಆಗಿರುವ ವೆಚ್ಚಗಳ ಅನುಮೋದನೆ ಮತ್ತು 2020-21ನೇ ಸಾಲಿನ ಅಂದಾಜು ಆಯವ್ಯಯ ಪಟ್ಟಿಯನ್ನು ಅಂಗೀಕರಿಸುವುದು.
11. ಲೆಕ್ಕಪರಿಶೋಧಕರು ದೃಢೀಕರಿಸಿದ 2019-20ನೇ ಸಾಲಿನ ನಿವ್ವಳ ಲಾಭದ ವಿಲೇವಾರಿ.
12. 2019-20ನೇ ಸಾಲಿನಲ್ಲಿ ಬ್ಯಾಂಕಿಗೆ ಸೇರಿಸಿಕೊಂಡ ಹಾಗೂ ಸಮಾಪನೆಯಾದ ಸದಸ್ಯರ ಪಟ್ಟಿಯ ಪರಿಶೀಲನೆ.
13. 2020-21ನೇ ಸಾಲಿನ ಲೆಕ್ಕಪರಿಶೋಧನೆಗೆ ಲೆಕ್ಕಪರಿಶೋಧಕರನ್ನು ನೇಮಿಸುವುದು ಹಾಗೂ ಅವರ ಸಂಭಾವನೆಯನ್ನು ನಿಗದಿಪಡಿಸುವುದು.
14. ಮೀಸಲು ಮತ್ತು ಇತರೆ ನಿಧಿಗಳ ವಾಸ್ತವಿಕ ಬಳಕೆಯ ವಿಮರ್ಶೆ.
15. ಬ್ಯಾಂಕಿನ ಸಿಬ್ಬಂದಿಬಲ ಮತ್ತು ನೌಕರರಿಗೆ ಕೊಡಲಾಗುವ ವೇತನ, ತುಟ್ಟಿಭತ್ಯೆ ಮತ್ತು ಇತರ ಭತ್ಯೆಗಳು ಹಾಗೂ ಸಿಬ್ಬಂದಿ ಸ್ವಯಂ ಸೇವಾ ನಿವೃತ್ತಿ ಬಗ್ಗೆ.
16. ಭಾರತೀಯ ರಿಸರ್ವ್ ಬ್ಯಾಂಕಿನ ನಿರ್ದೇಶನದಂತೆ ವ್ಯವಸ್ಥಾಪನ ಮಂಡಲಿ **(Board of Management)** ರಚಿಸುವ ಸಲುವಾಗಿ ಪ್ರಸ್ತಾವಿಸಲಾದ ಬೈಲಾಗಳನ್ನು ಸಭೆಯಲ್ಲಿ ಮಂಡಿಸಿ ಅನುಮೋದನೆ ಪಡೆಯುವುದು.
17. ಮುನ್ಸೂಚನೆಗೆ ಸಂಬಂಧಿಸಿದ ವಿಷಯಗಳ ಚರ್ಚೆ.
18. ಅಧ್ಯಕ್ಷರ ಅನುಮತಿಯ ಮೇರೆಗೆ ಇತರೆ ವಿಚಾರಗಳು.
19. ವಂದನಾರ್ಪಣೆ.

ಬೆಂಗಳೂರು
ದಿನಾಂಕ : 30.11.2020

ಆಡಳಿತ ಮಂಡಲಿಯ ಅಪ್ಪಣೆ ಮೇರೆಗೆ
ಸಹಿ/-
ಯಮುನ . ಪಿ
ಪ್ರಧಾನ ವ್ಯವಸ್ಥಾಪಕರು (ಪ್ರಭಾರ)

**ವಿಶೇಷ ಸೂಚನೆ : 2019-2020ನೇ ಸಾಲಿನ ಲೆಕ್ಕಪರಿಶೋಧನಾ ವರದಿ, ಆರ್ಥಿಕ ತಃಖ್ತೆ ಹಾಗೂ ಸಭೆಯಲ್ಲಿ ಭಾಗವಹಿಸಲು ಲಿಂಕ್ ಮಾಹಿತಿಗೆ ಬ್ಯಾಂಕಿನ ವೆಬ್‌ಸೈಟ್ Mahilacb.com ಗೆ ಸಂದರ್ಶಿಸುವುದು.**